ಕರ್ನಾಟಕ ಸರಕಾರ

# ಅಪರ ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಐವಾನ್-ಎ-ಶಾಹಿ ರಸ್ತೆ ಕಲಬುರಗಿ

ಸಂಖ್ಯೆ: ಸಿ8(1)ಸಪ್ರೌಶಾಶಿ/ಜೇ.ಪ.ತ/01/2024-25 ದಿನಾಂಕ: 22/01/2025

## ಅಧಿಸೂಚನೆ

ವಿಷಯ: ದಿನಾಂಕ: 01/01/2025 ರಲ್ಲಿದ್ದಂತೆ ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್-2 ಮತ್ತು ತತ್ಸಮಾನ ವೃಂದದ ಶಿಕ್ಷಕರ ಅಂತಿಮ ಜೇಷ್ಠತಾಪಟ್ಟಿಯನ್ನು ತಯಾರಿಸುವ ಕುರಿತು.

ಉಲ್ಲೇಖ: 1)ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017.

2)ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186:ಎಸ್‌ಆರ್‌ಎಸ್ 2018 ದಿನಾಂಕ: 27/02/2019

3)ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186:ಎಸ್‌ಆರ್‌ಎಸ್ 2018 ದಿನಾಂಕ: 15/05/2019

4)ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 175:ಸೆನೆನಿ: 2021 ದಿನಾಂಕ: 06/11/2021

5)ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ:106:ಸೆನೆನಿ:2021 ದಿನಾಂಕ: 10/12/2021

6)ಈ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ: ಸಿ2(1)/ಆಡಳಿತ/ಸ.ಶಿ/ಅಂ.ಜೇ.ಪ್ರ/10/2024-25 ದಿ:13.12.2024

7) ಈ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ: ಸಿ4(1)ಪ್ರೌಶಾಶಿ/ಜೇ.ಪ.ಪ್ರ/14/2024-25 ದಿ:15.01.2025

*****

ಉಲ್ಲೇಖಿತ ಆದೇಶಗಳಲ್ಲಿ ಪ್ರಸ್ತಾಪಿಸಲಾದ ನಿರ್ದೇಶನಗಳನ್ವಯ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957ರ ನಿಯಮಗಳನ್ವಯ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ "ಬಿ" ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಪ್ರಕ್ರಿಯೆಗಾಗಿ ಕಲಬುರಗಿ ಆಯುಕ್ತಾಲಯದ 07 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್-2 ಮತ್ತು ತತ್ಸಮಾನ ವೃಂದದ ಶಿಕ್ಷಕರ ಪ್ರಾರಂಭದ ಮೂಲ ವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (1) ರಿಂದ (05)ರ ವರೆಗಿನ ಆದೇಶಗಳ ಅನ್ವಯ ಸೂಕ್ತ ಕ್ರಮವಹಿಸುವ ಅಗತ್ಯವಿರುವುದರಿಂದ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಶಿಕ್ಷಕರ ಕರಡು ಜೇಷ್ಠತಾ ಪಟ್ಟಿ ದಿನಾಂಕ: 01/01/2025 ರಲ್ಲಿದ್ದಂತೆ ಇಲಾಖೆಯ ವೆಬ್‌ಸೈಟ್ **(https://cpikalaburgi.karnataka.gov.in)** ನಲ್ಲಿ ಪ್ರಕಟಿಸಲಾಗಿದೆ.

1. **2014 ರಲ್ಲಿ ಇರುವಂತೆ ಸ್ಥಳೀಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವುದನ್ನು ಯಾವುದೇ ಕಾರಣಕ್ಕೆ ಬದಲಾವಣೆ ಮಾಡಲಾಗುವುದಿಲ್ಲ.**
2. **ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ವಿವರದ ಮಾಹಿತಿಯನ್ನು ಮೂಲ ಸೇವಾ ವಹಿಯೊಂದಿಗೆ ತಾಳೆ ಮಾಡಿ, ಕೆ.ಜಿ.ಐ.ಡಿ ಸಂಖ್ಯೆ, (ಹೆಚ್.ಆರ್.ಎಂ.ಎಸ್ ನಲ್ಲಿರುವಂತೆ) ಶಿಕ್ಷಕರ ಹೆಸರು (ಮೂಲ ಸೇವಾ ಪುಸ್ತಕದಲ್ಲಿರುವಂತೆ), ಜನ್ಮ ದಿನಾಂಕ, ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಹಾಜರಾದ/ಸೇವೆಗೆ ಸೇರಿದ ದಿನಾಂಕ, ವಿಭಾಗಕ್ಕೆ ಬಂದ ದಿನಾಂಕ, ವರ್ಗಾವಣೆಗೊಂಡಲ್ಲಿ ಹೊಸ ಶಾಲಾ ವಿಳಾಸದ ಮಾಹಿತಿ, ಬೋಧನಾ ವಿಷಯ, ವಿದ್ಯಾರ್ಹತೆ/ವಿಷಯ/ಸ್ನಾತಕೋತ್ತರ ಪದವಿ, ಮೆರಿಟ್ ಮತ್ತು ನಿವೃತ್ತಿ ಹಾಗೂ ಮರಣದ ವಿವರಗಳನ್ನು ಪರಿಶೀಲಿಸಿಕೊಳ್ಳಲು ಹಾಗೂ ತಿದ್ದುಪಡಿಗೆ/ಹೊಸದಾಗಿ ಸೇರ್ಪಡೆ ಮಾಡಲು ಅರ್ಹ ಇರುವ ಪ್ರಕರಣಗಳ ಜಿಲ್ಲಾವಾರು**



Scanned with OKEN Scanner

ಕ್ರೋಢೀಕೃತ ಮಾಹಿತಿಯನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಸಮರ್ಥನೀಯ ಪೂರಕ ದೃಢೀಕೃತ ದಾಖಲೆಗಳೊಂದಿಗೆ ಸಾಫ್ಟ್ ಮತ್ತು ಹಾರ್ಡ್ ಪ್ರತಿಯನ್ನು ದೃಢೀಕರಣದೊಂದಿಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

3. ಆಕ್ಷೇಪಣೆಗಳನ್ನು ಅಧಿಕೃತ ಪೂರಕ ದಾಖಲೆಗಳೊಂದಿಗೆ (ದೃಢೀಕೃತ) ಸಲ್ಲಿಸಿದಲ್ಲಿ, ಅವುಗಳನ್ನು ಪರಿಗಣಿಸಲಾಗುವುದು. ಪೂರಕ ದಾಖಲೆಯಿಲ್ಲದೆ ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಸದರಿ ಪ್ರಕ್ರಿಯೆಯಲ್ಲಿ ತಪ್ಪು ಮಾಹಿತಿ/ದಾಖಲೆ ನೀಡಿದ ಶಿಕ್ಷಕರ ಹಾಗೂ ಸಂಸ್ಥೆಯ ಮುಖ್ಯಸ್ಥರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
4. ಪ್ರಕಟಿತ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಶಾಲಾ ಹಂತದಲ್ಲಿ ಮುಖ್ಯೋಪಾಧ್ಯಾಯರು ತಾಲ್ಲೂಕು ಹಂತದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಹಂತದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರು ಈ ಅಧಿಸೂಚನೆ ಪತ್ರಕ್ಕೆ ಲಗತ್ತಿಸಲಾದಂತೆ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ, ದೃಢೀಕರಣ ನೀಡುವ ಷರತ್ತಿಗೆ ಒಳಪಟ್ಟಿದೆ.
5. ನೇರ ನೇಮಕಾತಿ ಹೊಂದಿದ ಶಿಕ್ಷಕರ ಮಾಹಿತಿ ಆಯ್ಕೆ ಪಟ್ಟಿಯಂತೆ, ಹೆಚ್ಚುವರಿ ನೇಮಕಾತಿ ಹೊಂದಿದ ಶಿಕ್ಷಕರ ಮಾಹಿತಿ ಹೆಚ್ಚುವರಿ ಆಯ್ಕೆ ಪಟ್ಟಿಯಂತೆ, ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಪ್ರೌಢ ಶಾಲಾ ಶಿಕ್ಷಕರ ವೃಂದಕ್ಕೆ ಬಡ್ತಿ ಹೊಂದಿದ ಶಿಕ್ಷಕರ ಮಾಹಿತಿ ಬಡ್ತಿ ಆದೇಶದಂತೆ, ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಮಾಹಿತಿ ನೇಮಕಾತಿ ಆದೇಶದಂತೆ, ಅಂತರ್ ಘಟಕ ವರ್ಗಾವಣೆಗೊಂಡ ಶಿಕ್ಷಕರ ಮಾಹಿತಿ ಸಂಬAಧಿಸಿದ ಆದೇಶಗಳಂತೆ ಹಾಗೂ ನೇರ ನೇಮಕಾತಿ ಶಿಕ್ಷಕರ ಪಟ್ಟಿಯ ಮಾಹಿತಿಯನ್ನು ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾದ ಶಿಕ್ಷಕರುಗಳ ನೇರ ನೇಮಕಾತಿ ಆಯ್ಕೆ ಪಟ್ಟಿಯ ಮೆರಿಟ್ ಆಧರಿಸಿ ತಯಾರಿಸಲಾಗುವುದು
6. ಒಬ್ಬ ಶಿಕ್ಷಕರ ಹೆಸರು ಪುನರಾವರ್ತನೆಯಾಗಿದ್ದಲ್ಲಿ ವಾಸ್ತವವಾಗಿ ಮತ್ತು ನೈಜವಾಗಿ ಅವರು ಆಯ್ಕೆಯಾಗಿರುವ ಪಟ್ಟಿಯನುಸಾರ ಒಂದನ್ನು ಮಾತ್ರ ಉಳಿಸುವುದು ಹಾಗೂ ಶಿಕ್ಷಕರು ಶಾಲೆಯ ವಿಳಾಸ, ಜಿಲ್ಲೆ ಇತ್ಯಾದಿ ವಿವರಗಳ ಮಾಹಿತಿಯನ್ನು ಎಲ್ಲಾ ಜಿಲ್ಲೆಯವರು ಪರಿಶೀಲಿಸಿ, ತಮ್ಮ ಜಿಲ್ಲೆಯಲ್ಲಿ ಆ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುವುದನ್ನು ಖಚಿತಪಡಿಸಿಕೊಂಡು ವಾಸ್ತವವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ಮಾತ್ರ ನಮೂದಿಸುವುದು.
7. ಕರ್ನಾಟಕ ಸರ್ಕಾರದ ಜೇಷ್ಠತಾ ನಿಯಮಗಳು 1957ರ ನಿಯಮ-3, 5ರ ಮತ್ತು ಉಪನಿಯಮಗಳು ಸೇರಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿAದ ಪ್ರೌಢ ಶಾಲಾ ಶಿಕ್ಷಕರ ವೃಂದಕ್ಕೆ ಬಡ್ತಿ ಹೊಂದಿದ ಶಿಕ್ಷಕರ ಹೆಸರನ್ನು ಬಡ್ತಿ ಆದೇಶ ಜಾರಿಗೊಳಿಸಿದ ದಿನಾಂಕವನ್ನು ಪರಿಗಣಿಸಿ, ಅವರುಗಳು ವಾಸ್ತವವಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಜೇಷ್ಠತೆಗೆ ಪರಿಗಣಿಸತಕ್ಕದ್ದು. ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿ ಬಡ್ತಿ ಹೊಂದಿದ, ನಿವೃತ್ತರಾದ, ನಿಧನರಾಗಿರುವ, ರಾಜಿನಾಮೆ ನೀಡಿರುವ, ಇತರೆ ಕಾರಣಗಳು ಇದ್ದಲ್ಲಿ ಷರಾ ಅಂಕಣದಲ್ಲಿ ವಿವರಗಳನ್ನು ತಪ್ಪದೇ ಕಡ್ಡಾಯವಾಗಿ ನಮೂದಿಸುವುದು. ಸೇವಾ ವಿವರವನ್ನು ಸೇವಾ ಪುಸ್ತಕ ಪರಿಶೀಲಿಸಿ, ನೈಜ ಮಾಹಿತಿಯನ್ನು ದಾಖಲಿಸತಕ್ಕದ್ದು.
8. ನೇರ ನೇಮಕಾತಿ ಹೊಂದಿದ ಶಿಕ್ಷಕರುಗಳ ಆಯ್ಕೆ ಪಟ್ಟಿಯ ಮೆರಿಟ್‌ನ್ನು ಆಧರಿಸಿ ಜೇಷ್ಠತೆಯನ್ನು ಒಂದೇ ಮೆರಿಟ್ ಹೊಂದಿದ್ದಲ್ಲಿ ಜೇಷ್ಠತಾ ನಿಯಮಗಳನುಸಾರ ಸರಿಯಾಗಿ ನಮೂದಿಸುವುದು ಅವರ ಸ್ಥಾನವನ್ನು ನಿಗದಿಪಡಿಸುವುದು.
9. ಗ್ರಾಮೀಣ ಕೃಪಾಂಕದಡಿ ಸೇವೆಯಿಂದ ವಜಾಗೊಂಡು ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಗೊಂಡ ಶಿಕ್ಷಕರ ಜೇಷ್ಠತೆಯನ್ನು ಪರಿಷ್ಕೃತ ಪಟ್ಟಿಯಂತೆ ಪರಿಗಣಿಸತಕ್ಕದ್ದು.



Scanned with OKEN Scanner

10. ಸ್ನಾತಕೋತ್ತರ ಪದವಿ ಪಡೆದು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಉಪನ್ಯಾಸಕರಾಗಿ ಬಡ್ತಿ ಹೊಂದಿದವರ ಮಾಹಿತಿಗಳನ್ನು ಷರಾ ಅಂಕಣದಲ್ಲಿ ತಪ್ಪದೇ ಕಡ್ಡಾಯವಾಗಿ ನಮೂದಿಸುವುದು. ಪ್ರಸ್ತುತ ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರ ವಿದ್ಯಾರ್ಹತೆ (ಪಿ.ಜಿ. ಕೋರ್ಸ್) ಅಂಕಣದಲ್ಲಿ ತಪ್ಪದೆ ಸರಿಯಾಗಿ ನಮೂದಿಸುವುದು.
11. ಜಿಲ್ಲಾವಾರು ಪ್ರತ್ಯೇಕಿಸಿದ ಪಟ್ಟಿಯ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರು ಆಯಾ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಗೆ ಪಟ್ಟಿಯ ಮಾಹಿತಿಯನ್ನು ನೀಡುವುದು. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪಟ್ಟಿಯಲ್ಲಿನ ಸಹ ಶಿಕ್ಷಕರುಗಳ ಸೇವಾ ವಿವರವನ್ನು ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿಕೊಂಡು ನೈಜವಾದ ಹಾಗೂ ನಿಖರವಾದ ಮಾಹಿತಿಯನ್ನು ದಾಖಲಿಸಿದ ಪಟ್ಟಿಯ ಮಾಹಿತಿಯನ್ನು ದೃಢೀಕರಣದೊಂದಿಗೆ ಪಡೆಯುವುದು. ಅದರಂತೆ ಪಟ್ಟಿಯ ಮಾಹಿತಿಯನ್ನು ಕರಾರುವಕ್ಕಾಗಿ ಪುನಃ ಪರಿಶೀಲಿಸಿಕೊಂಡು ಉಪನಿರ್ದೇಶಕರ ಹಂತದಲ್ಲಿ ಸೂಕ್ತವಾದ ಮತ್ತು ನಿರ್ಧಿಷ್ಟವಾದ ದಿನಾಂಕವಾರು ಕಾರ್ಯಸೂಚಿಯಂತೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವುದು.
12. ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳನ್ನು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ

**ವಿವಿಧ ಹಂತಗಳಲ್ಲಿ ಅಧಿಕಾರಿಗಳು ಕೈಗೊಳ್ಳಬೇಕಾದ ಕಾರ್ಯಗಳು ಹಾಗೂ ಕಾಲಮಿತಿ ನಿಗದಿ**

| ಕ್ರ.ಸಂ | ವಿವರ | ದಿನಾಂಕ | ಕ್ರಮವಹಿಸುವ ಅಧಿಕಾರಿಗಳು |
|---|---|---|---|
| 1 | 2 | 3 | 4 |
| 1 | ಪ್ರಕಟಿಸಿದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯಲ್ಲಿ ನಮೂದಿತ ಶಿಕ್ಷಕರು ಈ ಅಧಿಸೂಚನೆಗೆ ಲಗತ್ತಿಸಿದ ನಮೂನೆ-1 ರಲ್ಲಿ ತಮ್ಮ ಆಕ್ಷೇಪಣೆಯನ್ನು ಕಛೇರಿಯ / ಶಾಲೆಯ ಮುಖ್ಯಸ್ಥರ ದೃಢೀಕರಣ ದೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು. | 27/01/2025 | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ವಿಷಯ ನಿರ್ವಾಹಕರು ಹಾಗೂ ಅಧೀಕ್ಷಕರು. ಮ್ಯಾನೇಜರ್ ರವರು ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ಸ್ವೀಕರಿಸುವುದು ಮತ್ತು **Google Spread Sheet** ನಲ್ಲಿ ಮಾಹಿತಿಯನ್ನು ಇಇಡಿಎಸ್ ತಂತ್ರಾಂಶದಲ್ಲಿರುವಂತೆ ಪರಿಶೀಲಿಸಿಕೊಳ್ಳುವುದು |
| 2 | ಪ್ರಕಟಿಸಿದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯಲ್ಲಿ ಕೈ ಬಿಟ್ಟು ಹೋಗಿರುವ ಶಿಕ್ಷಕರು ಹಾಗೂ ಜೇಷ್ಠತಾ ಪಟ್ಟಿಯಲ್ಲಿ ಹೊಸದಾಗಿ ಹೆಸರು ಸರಿಪಡೆ ಮಾಡಬೇಕಾದ ಶಿಕ್ಷಕರು ಈ ಅಧಿಸೂಚನೆಗೆ ಲಗತ್ತಿಸಿದ ನಮೂನೆ-2 ರಲ್ಲಿ ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆ ಗಳೊಂದಿಗೆ ಶಾಲೆಯ/ಕಛೇರಿಯ ಮುಖ್ಯಸ್ಥರ ದೃಢೀಕರಣದೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು. | 17/02/2025 | ಸದರಿ ಜೇಷ್ಠತಾ ಪಟ್ಟಿಯಲ್ಲಿ ಹೊಸದಾಗಿ ಸರ್ಪಡೆ ಮಾಡಬೇಕಾದ ಶಿಕ್ಷಕರ ಮಾಹಿತಿಯು ನಿಗದಿತ ನಮೂನೆ-2 ರಲ್ಲಿ ಪೂರಕ ದಾಖಲೆಗಳೊಂದಿಗೆ ಪಡೆದು ಮೂಲ ಸೇವಾ ವಹಿಯೊಂದಿಗೆ ಪರಿಶೀಲಿಸಿ, ಅರ್ಜಿಗಳ ಕ್ರೋಢೀಕರಣ ಮಾಹಿತಿಯನ್ನು ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಅರ್ಜಿಗಳಿಗೆ ಸೂಕ್ತ ಕಾರಣ ಸಮೇತ ನಿಮ್ಮ ಹಂತದಲ್ಲಿ ಹಿಂಬರಹ ನೀಡಿ, ಅದರ ಒಂದು ಪ್ರತಿಯನ್ನು ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. |
| 3 | ಸ್ವೀಕರಿಸಿದ ನಮೂನೆ-1 ಹಾಗೂ ನಮೂನೆ-2 ಅನ್ನು ಪ್ರತ್ಯೇಕವಾಗಿ ವಿಂಗಡಿಸಿ, ಪರಿಶೀಲಿಸಿ, ದೃಢೀಕೃತ ಪಟ್ಟಿ ಹಾಗೂ ದೃಢೀಕರಣದೊಂದಿಗೆ ಪೂರಕ | 20/02/2025 | ಉಪನಿರ್ದೇಶಕರ ಕಛೇರಿ ಹಂತದ ವಿಷಯ ನಿರ್ವಾಹಕರು ಮತ್ತು ಅಧೀಕ್ಷಕರು ಹಾಗೂ ವ್ಯವಸ್ಥಾಪಕರು/ಪತ್ರಾಂಕಿತ ವ್ಯವಸ್ಥಾಪಕರು/ಪತ್ರಾಂಕತ ಸಹಾಯಕರು ಸ್ವೀಕರಿಸಿ ಸದರಿ ಆಕ್ಷೇಪಣೆಗಳನ್ನು ಪೂರಕ |



Scanned with OKEN Scanner

| | | | |
|---|---|---|---|
| | ದಾಖಲೆಗಳ ಸಮೇತ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. | | ದಾಖಲೆಗಳೊಂದಿಗೆ ಪರಿಶೀಲಿಸಿ, ನಿಗದಿತ ನಮೂನೆ-1 ರಲ್ಲಿನ ಅರ್ಹ ಆಕ್ಷೇಪಣೆಗಳಲ್ಲಿನ ಮಾಹಿತಿಯಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಯಾವುದೇ ದೋಷಗಳಿಲ್ಲದಂತೆ **Google Spread Sheet** ನಲ್ಲಿ ಸದರಿ ಮಾಹಿತಿಯನ್ನು ಇಇಡಿಎಸ್ ತಂತ್ರಾಂಶದಲ್ಲಿರು ಭರ್ತಿ ಮಾಡುವ ಕಾರ್ಯ ನಿರ್ವಹಿಸುವುದು.<br>ಸದರಿ ಜೇಷ್ಠತಾ ಪಟ್ಟಿಯಲ್ಲಿ ಹೊಸದಾಗಿ ಸರ್ಪಡೆ ಮಾಡಬೇಕಾದ ಶಿಕ್ಷಕರ ಮಾಹಿತಿಯು ನಿಗದಿತ ನಮೂನೆ-2 ರಲ್ಲಿ ಪೂರಕ ದಾಖಲೆಗಳೊಂದಿಗೆ ಪಡೆದು ಮೂಲ ಸೇವಾ ವಹಿಯೊಂದಿಗೆ ಪರಿಶೀಲಿಸಿ, ಅರ್ಹ ಶಿಕ್ಷಕರು ಅರ್ಜಿಗಳ ಕ್ರೋಢೀಕರಣ ಮಾಹಿತಿಯನ್ನು ಸಿದ್ಧಪಡಿಸಿ, (ಜೇಷ್ಠತಾ ಪಟ್ಟಿಯ ಕಾಲಂ ಗಳಲ್ಲಿ) ಕ್ರೋಢೀಕರಿಸಿ, ಕ್ರೋಢೀಕೃತ ಮಾಹಿತಿಯನ್ನು ಪೂರಕ ದಾಖಲೆಗಳೊಂದಿ ಸಲ್ಲಿಸುವುದು. ಮತ್ತು ಅರ್ಹ ರ್ಿಗಳಿಗೆ ಸೂಕ್ತ ಕಾರಣ ಸಮೇತ ನಿಮ್ಮ ಹಂತದಲ್ಲಿ ಹಿಂಬರಹ ನೀಡಿ, ಅದರ ಒಂದು ಪ್ರತಿಯನ್ನು ಸಲ್ಲಿಸುವುದು. |
| 4 | ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ, ದೃಢೀಕರಿಸಿದ ಪಟ್ಟಿಯೊಂದಿಗೆ ದೃಢೀಕರಣದೊಂದಿಗೆ ಹಾಗೂ ಪೂರಕ ದಾಖಲೆಗಳ ಸಮೇತ ಆಯಾ ಜಿಲ್ಲಾ ಉಪನಿರ್ದೇಶಕರುಗಳು ಅಪರ ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ರವರಿಗೆ ಸಲ್ಲಿಸುವುದು. | 28/02/2025 | ಜಿಲ್ಲಾ ಉಪನಿರ್ದೇಶಕರ ಕಛೇರಿಯ ವಿಷಯ ನಿರ್ವಾಹಕರು ಸಲ್ಲಿಕೆಯಾಗಿರುವ ಆಕ್ಷೇಪಣೆಗಳನ್ನು ನಿಗದಿತ ನಮೂನೆ-1 **Google Spread Sheet** ನಲ್ಲಿ ಯಾವುದೇ ದೋಷಗಳು ಇಲ್ಲದಂತೆ ರೀತಿ ಮಾಡಿ ಪೂರಕ ದಾಖಲೆಗಳ ಸಮೇತ ಸಾಫ್ಟ್ ಪ್ರತಿ ಹಾಗೂ ಹರಡ್ ಪ್ರತಿಯನ್ನು ಖುದ್ದಾಗಿ ಸಂಬಂಧಿಸಿದ ವಿಷಯ ನರಿವಾಹಕರು, ಅಧೀಕ್ಷಕರು ಹಾಗೂ ಪತ್ರಾಂಕಿತ ಸಹಾಯಕರು ಒಳಗೊಂಡಂತೆ ಈ ಕಛೇರಿಗೆ ಹಾಜರಾಗಿ ಸಲ್ಲಿಸುವುದು.<br>ಸದರಿ ಜೇಷ್ಠತಾ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆಮಾಡಬೇಕಾದ ಶಿಕ್ಷಕರ ಮಾಹಿತಿಯು ನಿಗದಿತ ನಮೂನೆ-2 ರಲ್ಲಿ ಪೂರಕ ದಾಖಲೆಗಳೊಂದಿಗೆ ಪಡೆದು ಮೂಲ ಸೇವಾ ವಹಿಯೊಂದಿಗೆ ಪರಿಶೀಲಿಸಿ, ಅರ್ಹ ಶಿಕ್ಷಕರುಗಳ ಅರ್ಜಿಗಳ ಕ್ರೋಢೀಕರಣ ಮಾಹಿತಿಯನ್ನು ಸಿದ್ಧಪಡಿಸಿ, (ಜೇಷ್ಠತಾ ಪಟ್ಟಿಯ ಕಾಲಂ ಗಳಲ್ಲಿ) ಕ್ರೋಢೀಕರಿಸಿ, ಕ್ರೋಢೀಕೃತ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸುವುದು. ಮತ್ತು ಅರ್ಹ ಅರ್ಜಿಗಳ ಗಳಿಗೆ ಸೂಕ್ತ ಕಾರಣ ಸಮೇತ ನಿಮ್ಮ ಹಂತದಲ್ಲಿ ಹಿಂಬರಹ |



Scanned with OKEN Scanner

| | | | |
|---|---|---|---|
| | | | ನೀಡಿ. ಅದರ ಒಂದು ಪ್ರತಿಯನ್ನು ಪೂರಕ ದಾಖಲೆಗಳೊಂದಿಗೆ ನಿಗದಿತ ದಿನಾಂಕದಂದು ಖುದ್ದಾಗಿ ಅಪರ ಆಯುಕ್ತರ ಕಛೇರಿಗೆ ಹಾಜರಾಗಿ ಸಿ8(1) ಶಾಖೆಗೆ ಸಾಫ್ಟ ಕಾಪಿ ಮತ್ತು ಹಾರ್ಡ್ ಕಾಪಿ ಸಲ್ಲಿಸುವುದು. |

(ಮೋಹನ್ ಕುಮಾರ್ ಹಂಚಾಟೆ)
ವಿಭಾಗೀಯ ಸಹ ನಿರ್ದೇಶಕರು
ಅಪರ ಆಯುಕ್ತರ ಕಛೇರಿ

ಇವರಿಗೆ,

1. ಮಾನ್ಯ ನಿರ್ದೇಶಕರು ಅಪರ ಆಯುಕ್ತರ, ಕಛೇರಿ ಶಾಲಾ ಶಿಕ್ಷಣ ಇಲಾಖೆ ಕಲಬುರಗಿ
2. ಸಹ ನಿರ್ದೇಶಕರು (ಆಡಳಿತ) ಅಪರ ಆಯುಕ್ತರ, ಕಛೇರಿ ಶಾಲಾ ಶಿಕ್ಷಣ ಇಲಾಖೆ ಕಲಬುರಗಿ
3. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ
4. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಪ್ರಾಂಶುಪಾಲರುಗಳ ಸೂಕ್ತ ಕ್ರಮಕ್ಕಾಗಿ
5. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ ಕಲಬುರಗಿ
6. ಕಲಬುರಗಿ ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಿಲ್ಲಾ ಉಪನಿರ್ದೇಶಕರ ಮೂಲಕ ಸೂಕ್ತ ಕ್ರಮಕ್ಕಾಗಿ
7. ಈ ಕಛೇರಿ ಇ-ಗವರನರ್ಸ್ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯ ಪಿಡಿಎಫ್ ಪ್ರತಿಯನ್ನು ನೀಡುತ್ತಾ, ಈ ಕಛೇರಿಯ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ
8. ಈ ಕಛೇರಿಯ ಸಿ2(1) ಶಾಖೆಗೆ ಮಾಹಿತಿಗಾಗಿ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ ಬೆಂಗಳೂರು-01 ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು ಧಾರವಾಡ ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ
3. ಈ ಕಛೇರಿ ಮಾನ್ಯ ಅಪರ ಆಯುಕ್ತರು ಇವರ ಆಪ್ತ ಶಾಖೆಗೆ ಕೊಡುತ್ತಾ, ಈ ವಿಷಯವನ್ನು ಮಾನ್ಯರ ಅವಗಾಹನೆಗೆ ತರಲು ತಿಳಿಸಿದೆ.
4. ಕಛೇರಿ ಪ್ರತಿ



Scanned with OKEN Scanner